**‘‘ನಾನು ಸಂಪಾದಿಸೋ ಅನ್ನ ಎಲ್ಲರಿಗೆ ಸಾಕಾಗವಲ್ದು. ನಾವೆಂಗೆ ಬದುಕ್ತಿದೀವಿ ಅಂತ ಕೇಳ್ಬ್ಯಾಡ. ಅರ್ಧ ಹೊಟ್ಟೇನೇ ಉಣ್ಣೋದೋ ನಾವು. ಆದರೆ, ಕೆಟ್ಟ ಹೆಸರು ತರಾ ಕೆಲಸ ಯಾವ್ದೂ ಮಾಡ್ತಿಲ್ಲ. ನನ್ನ ಅಸಹಾಯಕತೆನ ಹೆಂಗ ಅರ್ಥ ಮಾಡ್ಕೊಂಡ್ರೂ ನಾನೇನೂ ಅಂದ್ಕಳಲ್ಲ’’ ಅಂದಳು ಶಾಂತಿ.**

ಒಂದು ಸಾಮಾನೂ ಉಳಿಸ್ತಿರಲಿಲ್ಲ. ಅವನೂ ನಿನ್ನಂಗೇ ಹೋಗಿದ್ರೆ ಚೊಲೋ ಇತ್ತು ಅಂದ್ಕೊಂಡ್ವಿ. ಒಂದಿನ ಅವನು ಕಾಣಿಸಲಿಲ್ಲ. ಮಾಡಬೇಕಾದ ಪ್ರಯತ್ನಗಳು ಮಾಡಿದ್ವಿ. ಸಿಕ್ಕು ಬಿಟ್ರೆ ಹೆಂಗ ಅಂತ ಅಂಜಿಕೆ ಆಯ್ತು. ನಮ್ಮ ಕಣ್ಣೊಳಗೆ ನೀರಿಲ್ಲ. ಎಲ್ಲ ಇಂಗಿ ಹೋಗ್ಯಾವ. ಅಳಾಕೂ ಶಕ್ತಿಲ್ಲ. ರಾಘವ ನಿನಗ ತಮ್ಮ. ಅವನ ಮ್ಯಾಲೂ ನನಗ ನಂಬಿಕಿಲ್ಲ. ಯಾವತ್ತಿಗಾದರೂ ನಮಗ ಮೋಸ ಮಾಡ್ತಾನೇನೋ ಅಂತ ಅನುಮಾನನೇ ಐತೆ. ಅದಕ್ಕ ಕಾರಣನೂ ಐತೆ. ಇವತ್ತಿಗೇ ಅವನ್ನ ಹಿಡಿದಿಡಕ ಆಗವಲ್ದು. ಇನ್ಮ್ಯಾಲೆ ನಿಮ್ಮಿಬ್ರನ್ನೂ ಹುಡುಕ್ಯಾಡಿಕೊಂಡು ಇರಕಾಗದಿಲ್ಲೋ ಶಿವಾ” ದುಃಖದಿಂದಾಗಿ ಸ್ವಲ್ಪ ಹೊತ್ತು ಮಾತಾಡದಾದಳು.

ಶಿವರಾವು ಮೌನವಾಗಿ ಕುಂತಿದ್ದ.

“ನಾನು ಸಂಪಾದಿಸೋ ಅನ್ನ ಎಲ್ಲರಿಗೆ ಸಾಕಾಗವಲ್ದು. ನಾವೆಂಗೆ ಬದುಕ್ತಿದೀವಿ ಅಂತ ಕೇಳ್ಬ್ಯಾಡ. ಅರ್ಧ ಹೊಟ್ಟೇನೇ ಉಣ್ಣೋದೋ ನಾವು. ಆದರೆ, ಕೆಟ್ಟ ಹೆಸರು ತರಾ ಕೆಲಸ ಯಾವ್ದೂ ಮಾಡ್ತಿಲ್ಲ. ನನ್ನ ಅಸಹಾಯಕತೆನ ಹೆಂಗ ಅರ್ಥ ಮಾಡ್ಕೊಂಡ್ರೂ ನಾನೇನೂ ಅಂದ್ಕಳಲ್ಲ” ಅಂದಳು.

ಆಗ ಶಿವರಾವು, “ನಾನಿಲ್ಲೇ ಇದ್ದುಬುಡತೀನಿ ಅಂತ ಯಾಕಂದುಕಳಕತ್ತೀಯೋ ನನಗ ಅರ್ಥ ಆಗವಲ್ದು. ಇರದಿಲ್ಲ ಅಂತ ಮಾತು ಕೊಡ್ತೀನಿ ಸರಿನಾ?” ಬಿಂಕದಿಂದ ಅಂದ.

ಶಾಂತಿ ದುಃಖ ತಡೆದುಕೊಳ್ಳದಾದಳು.

“ನಾಳೆ ಮುಂಜಾಲೆ ಸೂರ್ಯ ಬರಾ ಹೊತ್ತಿಗೆ ಈ ಊರಾಗ ಇರದಿಲ್ಲ ಅಂತ ಮಾತು ಕೊಡಾಕತ್ತೀನಿ” ಅಂದ ಮತ್ತೆ.

“ಎಲ್ಲದಕ್ಕೂ ಒಂದು ಅಳು ಅತ್ತು ಸುಮ್ಮನಾಗ್ತೀನಿ” ಅಂದಳು ದುಃಖದಲ್ಲೇ ಶಾಂತಿ.

ರಾಘವ ಬಂದ. ಶಾಂತಿ ಶಿವರಾವುನ ತೋರಿಸ್ತಾ ಅಂದಳು, “ಅಣ್ಣ ಬಂದಾನೋ”.

“ವಾಸಾ?”

“ಅಲ್ಲ ಶಿವ.”

“ವಾಸಂದ್ಕಂಡೆ.”

ಕನಿಷ್ಠ ಶಿವರಾವುನ ನೋಡೋಕೂ ಪ್ರಯತ್ನಿಸಲಿಲ್ಲ. ಚಾಪೆ ತಗಂಡು ಅಡಿಗೆ ಮನಿಯೊಳಗೆ ಹೋಗಿ ಹಾಸಿಕೊಂಡ. ಈ ಪ್ರಪಂಚದೊಂದಿಗೆ ಸಂಬಂಧವೇ ಇಲ್ಲದವನಂತೆ ಅಡ್ಡ ಮಲಗಿಕೊಂಡ. ಇನ್ನು ಸ್ವಲ್ಪ ಹೊತ್ತಿಗೆ ಗೊರಕೆ ಕೇಳಿಸತೊಡಗಿತು.

“ಚೊಲೊತ್ನ್ಯಾಗಿ ಎತ್ತರ ಬೆಳದುಬುಟ್ಟಾನ” ಅಂದ ಶಿವರಾವು ರಾಘವನನ್ನುದ್ದೇಶಿಸಿ.

“ಅವನು ಬಂದಾಂದ್ರೆ ಮೂರೂವರೆ ಆಗಿರ್ತಾದ” ಅಂದಳು ಶಾಂತಿ ಅದಕ್ಕುತ್ತರವಾಗಿ.

“ನಸಿಗ್ಗೆ ರೈಲು ಎಷ್ಟಕ್ಕ ಬರುತ್ತ? ಐದಕ್ಕೇ ಅಲ್ಲ?” ಅಂದ ಶಿವರಾವು.

“ರೈಲಿಗಿಂತ ಬಸ್ಸೇ ಮೊದಲು ಹೋಗುತ್ತ” ಅಂದಳು ಶಾಂತಿ.